ಅಸಲು ದಾವೆ ಸಂಃ 256/2021
ಪಿ.ಡಬ್ಲ್ಯೂಃ1

ಈ ದಿನ ದಿನಾಂಕಃ 03-08-2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲು **02** ನೇ ಪ್ರತಿವಾದಿ ಪರ ಶ್ರೀ ಹೆಚ್ ಎಂ ವಿ ವಕೀಲರಿಂದಃ

ಕ್ರಯ ಪತ್ರದ ಮೂಲಕ ಪಡೆದ ಆಸ್ತಿಯು ಮೂಲತಃ ಈರಪ್ಪನವರಿಗೆ ಸೇರಿದ್ದಾಗಿರುತ್ತದೆ. ಈರಪ್ಪನವರ ಹೆಸರಿಗಿದ್ದ ದಾಖಲೆಗಳನ್ನು ನಾನು ನೋಡಿರುತ್ತೇನೆ. ಅವುಗಳು ಇಸಿ , ಮ್ಯುಟೇಷನ್ ಇತ್ಯಾದಿ. ಸದರಿ ದಾಖಲೆಗಳಲ್ಲಿ ಈರಪ್ಪನವರ ತಂದೆಯ ಹೆಸರು ಉಚ್ಚೀರಪ್ಪ ಎಂದು ನಮೂದಾಗಿರುತ್ತದೆ. ವಂಶವೃಕ್ಷದಲ್ಲಿ ಈರಪ್ಪನವರ ತಂದೆಯ ಹೆಸರು ಸಣ್ಣಈರಪ್ಪ ಎಂದು ನಮೂದಾಗಿರುತ್ತದೆ. ಈರಪ್ಪ ಬಿನ್ ಸಣ್ಣಈರಪ್ಪ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಹಿರಿಯಮ್ಮ ಮರಣ ಹೊಂದಿದ ದಿನಾಂಕವನ್ನು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು 2019-20 ನೇ ಸಾಲಿನಲ್ಲಿ ಮರಣ ಹೊಂದಿರಬಹುದು ಎಂದು ನುಡಿಯುತ್ತಾರೆ. ಹಿರಿಯಮ್ಮನ ಹೆಸರಿನಿಂದ ಸರೋಜಮ್ಮ ಹಾಗೂ ಗೌರಮ್ಮನ ಹೆಸರಿಗೆ ಖಾತೆ ಬದಲಾವಣೆ ಆಗಿರುವುದನ್ನು ತೋರಿಸಲು ಪಹಣಿಯನ್ನು ಸಲ್ಲಿಸಿರುತ್ತೇನೆ. ಸದರಿ ಬದಲಾವಣೆಯ ಮ್ಯುಟೇಷನ್ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೆ ಸಮಸ್ಯೆ ಇರುವುದಿಲ್ಲ. ಸರೋಜಮ್ಮ , ಸುಶೀಲಮ್ಮ , ಗೌರಮ್ಮನ ಅಜ್ಜನ ಹೆಸರು ವಂಶವೃಕ್ಷದಲ್ಲಿ ಏನೆಂದು ನಮೂದಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

ನಿಪಿ.10 ರಲ್ಲಿ ಇರುವ ವಂಶವೃಕ್ಷವನ್ನು ನಾನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.10 ರಲ್ಲಿ ಇರುವ ವಂಶವೃಕ್ಷವು ಈರಪ್ಪ ಬಿನ್ ವೂವಪ್ಪ ಅವರಿಗೆ ಸಂಬಂಧಪಟ್ಟದ್ದಾಗಿರುತ್ತದೆಯೇ ಹೊರತು ಈರಪ್ಪ ಬಿನ್ ಹುಚ್ಚಪ್ಪ ವಂಶದವರಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕೈ ತಪ್ಪಿನಿಂದ ಚ ಬದಲಿಗೆ ವ ಎಂದು ನಮೂದಾಗಿರುತ್ತದೆ.

ಈರಪ್ಪನವರು 1994 ನೇಸಾಲಿನಲ್ಲಿ ಮರಣ ಹೊಂದಿರುತ್ತಾರೆ. ಅವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಪಿ.10 ನ್ನು ತಯಾರು ಮಾಡಲು ಯಾವ ದಾಖಲೆಗಳನ್ನು ಮೂಲವಾಗಿ ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ಹಾಗಾಗಿ ವಂಶವೃಕ್ಷದಲ್ಲಿ ನಮೂದಾಗಿರುವ ಗೌರಮ್ಮ , ಸುಶೀಲಮ್ಮ , ಸರೋಜಮ್ಮನಿಗೂ ಈರಪ್ಪ ಬಿನ್ ಹುಚ್ಚಪ್ಪನಿಗೂ ಯಾವುದೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ಹಿರಿಯಮ್ಮ ಕೋಂ ಈರಪ್ಪ ಮತ್ತು ಪಹಣಿಯಲ್ಲಿರುವ ಹಿರಿಯಮ್ಮ ಕೋಂ ಈರಪ್ಪ ಬೇರೆ ಬೇರೆಯವರಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಗೂ ಸರೋಜಮ್ಮ ಶಾಮೀಲಾಗಿ ದಾಖಲಾತಿಗಳಲ್ಲಿ ನಮೂದಾಗಿರುವ ಹಿರಿಯಮ್ಮನ ಹೆಸರನ್ನು ದುರ್ಬಳಕೆ ಮಾಡಿಕೊಂಡು ಅವರ ಆಸ್ತಿಯನ್ನು ಪಡೆಯಲು ಸುಳ್ಳು ದಾಖಲಾತಿಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ಈರಪ್ಪನಿಗೆ ದಾವಾ ಆಸ್ತಿಯ ಚೆಕ್ಕುಬಂದಿಯ ಒಳಗಿರುವ ಆಸ್ತಿಯು ದರ್ಕಾಸ್ ಮೂಲಕ ಬಂದಿರುತ್ತದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಚೆಕ್ಕುಬಂದಿಗಳನ್ನು ಅಕ್ಕಪಕ್ಕ ಇರುವ ಆಸ್ತಿಗಳನ್ನು ಅನುಸರಿಸಿ ನಮೂದಿಸಿರುತ್ತೇವೆ. ದಾವಾ ಆಸ್ತಿಯನ್ನು ದರ್ಕಾಸ್ ಮೂಲಕ ಪಡೆಯುವ ಕಾಲಕ್ಕೆ ಮಾಡಿರುವ ಸ್ಕೆಚ್ ನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ದಾಖಲೆಯನ್ನು ಪಡೆಯಲು ಯಾವುದೇ ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸರಿ. ಹಾಗಾಗಿ ಈರಪ್ಪ ನಿಗೆ ದರ್ಕಾಸ್ ಮೂಲಕ ಬಂದಿರು ಆಸ್ತಿಯನ್ನು ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪೂರ್ವಕ್ಕೆ ಸರ್ವೆ ನಂ.92 ರ ಆಸ್ತಿ , ಪಶ್ಚಿಮಕ್ಕೆ ಸರ್ವೆ ನಂ.95 ರ ಆಸ್ತಿ, ಉತ್ತರಕ್ಕೆ ನಾಗವೇಣಮ್ಮನ ಆಸ್ತಿ, ದಕ್ಷಿಣಕ್ಕೆ ಸರ್ವೆ ನಂ.17 ರ ಆಸ್ತಿ ಇರುತ್ತದೆ. ಸದರಿ ಚೆಕ್ಕುಬಂದಿಯಲ್ಲಿ ಈರಪ್ಪನ ಆಸ್ತಿ ಇದೆ ಎಂದು ಪಹಣಿಗಳಲ್ಲಿ ನೋಡಿರುತ್ತೇನೆ. 2014-15 ನೇ ಸಾಲಿನ ಪಹಣಿಗಳಲ್ಲಿ ನಾನು ಚೆಕ್ಕುಬಂದಿಯಲ್ಲಿ ಈರಪ್ಪನ ಆಸ್ತಿ ಇರುತ್ತದೆ ಎಂದು ನೋಡಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

ನಾನು ಕ್ರಯಕ್ಕೆ ಪಡೆದ ಆಸ್ತಿಯ ಚೆಕ್ಕುಬಂದಿ ನಿಪಿ.2 ರಲ್ಲಿ ನಮೂದಾಗಿರುವುದಿಲ್ಲ ಎಂದರೆ ಸರಿ. ನಾವು ಕ್ರಯಕ್ಕೆ ಪಡೆಯುವ ಪೂರ್ವದಲ್ಲಿ ದಾವಾ ಆಸ್ತಿಯಲ್ಲಿ ಈರಪ್ಪ ಸ್ವಾಧೀನದಲ್ಲಿ ಇದ್ದರು ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸರಿ.

2 ನೇ ಪ್ರತಿವಾದಿ ಪ್ರಸ್ತುತ ದಾವೆಯಲ್ಲಿ ಸಲ್ಲಿಸಿರುವ ತಕರಾರನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ದಾವಾ ಆಸ್ತಿಯ ಚೆಕ್ಕುಬಂದಿಯ ಒಳಗೆ 2 ನೇ ಪ್ರತಿವಾದಿಯ ಆಸ್ತಿ ಇರುವುದಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಯು ಸರ್ವೆ ನಂ.4 ಹರೋನಹಳ್ಳಿಯಲ್ಲಿ 5 ಎಕರೆ ಜಮೀನಿನಲ್ಲಿ ಸ್ವಾಧೀನದಿಲ್ಲಿ ಇರುತ್ತಾರೆ ಎಂದರೆ ಸರಿ. ಸದರಿ 5 ಎಕರೆ ಜಮೀನಿನಲ್ಲಿ ಅಡಿಕೆ , ಮಾವು ಹಾಗೂ ಮೆಕ್ಕೆಜೋಳವನ್ನು ಬೆಳೆಯುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕೇವಲ ಮೆಕ್ಕೆಜೋಳವನ್ನು ಬೆಳೆಯುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ಹಳ್ಳ , ಪಶ್ಚಿಮಕ್ಕೆ ಟ್ರೆಂಚ್ ಹಾಗೂ ಅರಣ್ಯ ಪ್ರದೇಶ , ಉತ್ತರಕ್ಕೆ ಟ್ರೆಂಚ್ ಹಾಗೂ ಅರಣ್ಯ ಪ್ರದೇಶ , ದಕ್ಷಿಣಕ್ಕೆ ಹಳ್ಳ ಹಾಗೂ 1 ನೇ ಪ್ರತಿವಾದಿಯ ಆಸ್ತಿ. ಸದರಿ ಚೆಕ್ಕುಬಂದಿಯ ಒಳಗೆ 2 ನೇ ಪ್ರತಿವಾದಿಯ ಆಸ್ತಿ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸರ್ವೆ ನಂಬರ್ 4 ರಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಮಂಜೂರು ಮಾಡುವಂತೆ 2 ನೇ ಪ್ರತಿವಾದಿಯು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂಬರ್ 4 ರಲ್ಲಿ 2 ನೇ ಪ್ರತಿವಾದಿಯನ್ನು ಹೊರತುಪಡಿಸಿ ಬೇರೆಯವರೂ ಸಹ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ಹೊರತುಪಡಿಸಿ 2 ನೇ ಪ್ರತಿವಾದಿಯ ಕುಟುಂಬಕ್ಕೆ ಬೇರೆ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 17 ರಲ್ಲಿ ಸುಮಾರು 400 ಎಕರೆಗೂ ಹೆಚ್ಚು ಜಮೀನು ಇರುತ್ತದೆ. ಸರ್ವೆ ನಂಬರ್ 96 ರ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸರ್ವೆ ನಂಬರ್ 17 ರ 400 ಎಕರೆ ಜಮೀನಿನಲ್ಲಿ ಸರ್ವೆ ನಂಬರ್ 96 ಉತ್ತರ ದಿಕ್ಕಿನಲ್ಲಿರುತ್ತದೆ. ಕೋಡಿ ದುರಸ್ತಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸಲು ಯಾವುದೇ ಸಮಸ್ಯೆ ಇರುವುದಿಲ್ಲ ಎಂದರೆ ಸರಿ.

ಸರೋಜಮ್ಮ, ಸುಶೀಲಮ್ಮ ಹಾಗೂ ಗೌರಮ್ಮ ಆಸ್ತಿಯನ್ನು ಮಾರಾಟ ಮಾಡಬೇಕೆಂದಿರುವ ವಿಚಾರ ನನಗೆ 2018 ನೇ ಸಾಲಿನಲ್ಲಿ ತಿಳಿದುಬಂದಿರುತ್ತದೆ. ಸದರಿ ಸಮಯದಲ್ಲಿ ಆಸ್ತಿಯು ಹಿರಿಯಮ್ಮನ ಹೆಸರಿಗೆ ಖಾತೆಗಳಿದ್ದವು. ಸದರಿ ವಿಚಾರ ತಿಳಿದ ನಂತರ ಹಿರಿಯಮ್ಮ ಕೋಂ ಈರಪ್ಪನ ಹೆಸರಿಗೆ ಇದ್ದ ಆಸ್ತಿಯನ್ನು ಈರಪ್ಪ ಬಿನ್ ವೂವಪ್ಪನ ಹೆಂಡತಿ ಹಿರಿಯಮ್ಮನ ಹೆಸರಿಗೆ ಖಾತಾ ಬದಲಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಸಾಕ್ಷಿಯು ಮುಂದುವರೆದು ಸರೋಜಮ್ಮ, ಸುಶೀಲಮ್ಮ ಹಾಗೂ ಗೌರಮ್ಮ ಖಾತೆ ಬದಲಾವಣೆ ಮಾಡಿಸಿಕೊಟ್ಟಿರುತ್ತಾರೆ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು**)**

**ಓ.ಹೇ.ಕೇ. ಸರಿ ಇದೆ.**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.